ದಿನಾಂಕ 24.12.91 ರಂದು ಈ ಬಗ್ಗೆ ಕಾರವಾರ ಪುರ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ : 307:91 ಮನುಷ್ಯ ಕಾಣೆಯಾಗಿದ್ದಾನೆ ಎಂಬ ಶಿರೋನಾಮೆಯಲ್ಲಿ ನೋಂದಾಯಿಸಲಾಗಿದೆ. ದಿನಾಂಕ 28.12.91 ರಂದು ಕದ್ರ ಪೋಲೀಸಿನವರು ಅಂಶಿಫಟ್ಟ ಕಾಡಿನಲ್ಲಿ ಲಾರಿ ಚಾಲಕ ಮತ್ತು ಕ್ಲೀನರ್ ಗಳಿಗೆ ಸೇರಿದ ರಕ್ತವಿರುವ ಬಟ್ಟೆಗಳನ್ನು ಪತ್ತೆ ಮಾಡಿದ್ದಾರೆ. ಈ ಬಟ್ಟೆಗಳನ್ನು ಫಿರ್ಯಾದಿ ಯು.ಎ. ಹಮೀದ್ ಗುರ್ತು ಮಾಡಿರುತ್ತಾರೆ. ಫಿರ್ಯಾದಿಯು ಲಾರಿಯ ಚಾಲಕ ಮತ್ತು ಕ್ಲೀನರ್ ಗಳನ್ನು ಕೊಲೆ ಮಾಡಿ ಯಾರೋ ಅಪರಿಚಿತರು ಸಕ್ಕರೆ ದಾಸ್ತಾನನ್ನು ತೆಗೆದುಕೊಂಡು ಹೋಗಿರುವುದಾಗಿ ಸಂಶಯಪಟ್ಟಿದ್ದಾರೆ. ಮತ್ತು ಲಾರಿಯನ್ನು ಕಾರವಾರದಲ್ಲಿ ಬಿಟ್ಟಿರುವುದಾಗಿ ತಿಳಿಸುತ್ತಾರೆ.

ಈ ಮೇಲಿನ ಅಂಶಗಳ ಮೇಲೆ ದಿನಾಂಕ 29.12.1991 ರಂದು 12.30 ಘಂಟೆಗೆ ಕದ್ರ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ : 1 : 91 ಕಲಂ 302-201-392 ಭಾ.ದಂ.ಸಂ. ಪ್ರಕಾರ ನೋಂದಾಯಿಸಲಾಗಿದೆ. ತನಿಖೆಯು ಮುಂದುವರಿದಿದ್ದು, ಅಪರಾಧಿಗಳನ್ನು ಪತ್ತೆ ಮಾಡುವ ಕ್ರಮ ನಡೆದಿದೆ. ಲಾರಿಯ ಚಾಲಕ ಮತ್ತು ಕ್ಲೀನರ್‌ರವರ ಮೃತ ದೇಹಗಳು ಇನ್ನೂ ಪತ್ತೆಯಾಗಿರುವುದಿಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ :- ಇದರ ಬಗ್ಗೆ ತಾವು ಏನು ಮಾಡುತ್ತೀರೆಂಬುದನ್ನು ಇದರಲ್ಲಿ ಹೇಳಿಲ್ಲ, ಇದು ಕೇವಲ ನಿಮ್ಮ ಸ್ಟೇಟ್ ಮೆಂಟ್ ಆಗಿದೆಯೇ ಹೊರತು ಆ ಮೃತ ದೇಹಗಳು ಇನ್ನೂ ಪತ್ತೆ ಆಗಿಲ್ಲ. ಆದುದರಿಂದ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಿ?

ಶ್ರೀ ಎಲ್.ಆರ್. ಶಿವರಾಮೇಗೌಡ :- ಮಾನ್ಯ ಉಪಾಧ್ಯಕ್ಷಣೆಯವರೆ,

ಉಪಾಧ್ಯಕ್ಷಣೆಯವರು :- ನಿಯಮ 334 ರ ಮೇಲೆ ಉಪಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವಿಲ್ಲ, ಈಗ ವಿಧೇಯಕವನ್ನು ಮಂಡಿಸುವುದು.

1992ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಬ್ಲೇಸಿಯಸ್ ಎಮ್ ಡಿಸೋಜ (ಕಾನೂನು ಸಚಿವರು) :- ಶ್ರೀಮತಿ ಮನೋರಮಾ ಮಧ್ವರಾಜ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು ಅವರ ಪರವಾಗಿ ಮಾನ್ಯ ಅಧ್ಯಕ್ಷರೇ- "1992ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷಣೆಯವರು :- ಪ್ರಸ್ತಾವ ಏನೆಂದರೆ 1992ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು" ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಬ್ಲೇಸಿಯಸ್ ಎಮ್. ಡಿಸೋಜ (ಕಾನೂನು ಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ "1992ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಣೆಯವರು :- ವಿಧೇಯಕವನ್ನು ಮಂಡಿಸಲಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ. 1992

(1992 ರ ವಿಧಾನಸಭಾ ವಿಧೇಯಕ - 3)

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ. 1966 (1966 ರ ಕರ್ನಾಟಕ ಅಧಿನಿಯಮ 18) ನ್ನು ಇದರಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಮತ್ತುಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ನಲವತ್ತು ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :-

1. **ಚಿಕ್ಕ ಹೆಸರು ಮತ್ತು ಪ್ರಾರಂಭ** :- (1) ಈ ಅಧಿನಿಯಮವನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ಅಧಿನಿಯಮ, 1992 ಎಂದು ಕರೆಯತಕ್ಕುದು.
(2) ಇದು ಈ ಕೂಡಲೇ ಜಾರಿಯಲ್ಲಿ ಬರತಕ್ಕುದು.

2. **6ನೇ ಪ್ರಕರಣದ ತಿದ್ದುಪಡಿ** :- ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ , 1966 (1966 ರ ಕರ್ನಾಟಕ ಅಧಿನಿಯಮ 18) ರ 6ನೇ ಪ್ರಕರಣದಲ್ಲಿ (ಸಿ೧) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕುದು. ಎಂದರೆ :-
"(ಸಿಎಫ್) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ನಿಗಮ";

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ರಾಜ್ಯ ಹಣಕಾಸು ನಿಗಮವು, ರಾಜ್ಯದಲ್ಲಿಯ ಕೈಗಾರಿಕೆಗಳ ಪ್ರವರ್ಧನೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಗೆ ಹಣಕಾಸನ್ನು ಒದಗಿಸುತ್ತಿದೆ. ಆದ್ದರಿಂದ, ಉತ್ತಮ ಸಮನ್ವಯಕ್ಕಾಗಿ ಕರ್ನಾಟಕ ರಾಜ್ಯ ಹಣಕಾಸು ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ಕರ್ನಾಟಕ ಕೈಗಾರಿಕಾ ಪ್ರಾದೇಶಿಕಾಭಿವೃದ್ಧಿ ಮಂಡಲಿಯ ಸದಸ್ಯರಲ್ಲೊಬ್ಬರನ್ನಾಗಿ ಸಹ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ವಿಧೇಯಕ.

ಮನೋರಮಾ ಮಧ್ವರಾಜ್,
ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು

ಮ. ಇನ್ನಾಸಪ್ಪ
ಕಾರ್ಯದರ್ಶಿ.

ಅನುಬಂಧ

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ 1966(1966 ರ ಕರ್ನಾಟಕ ಅಧಿನಿಯಮ 18) ರ ಉದ್ಧೃತ ಭಾಗ).

.XX XX XX

6. ರಚನೆ - ಮಂಡಲಿಯು ಈ ಮುಂದಿನ ಸದಸ್ಯರನ್ನು ಹೊಂದಿರತಕ್ಕುದು, ಎಂದರೆ :-
(ಎ) ಕರ್ನಾಟಕ ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಇವರು ಮಂಡಲಿಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ.
(ಬಿ) ಕರ್ನಾಟಕ ಸರ್ಕಾರದ ಕಾರ್ಯದರ್ಶಿ, ಹಣಕಾಸು ಇಲಾಖೆ ;
(ಸಿ) ಸರ್ಕಾರದ ಕಾರ್ಯದರ್ಶಿ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ;
(ಸಿಎ) ಕೈಗಾರಿಕಾಭಿವೃದ್ಧಿ ಇಲಾಖೆಯ ಕಮೀಷನರು ಮತ್ತು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕರು.
(ಸಿಬಿ) ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ನಿಯಮಿತ;

(ಸಿಸಿ) ಅಧ್ಯಕ್ಷರು, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿ ;
(ಸಿಡಿ) ನಿರ್ದೇಶಕರು, ಪಟ್ಟಣ ಯೋಜನೆ;
(ಸಿಇ) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮ ನಿಯಮಿತ :
(ಡಿ) ಮಂಡಲಿಯ ಕಾರ್ಯ ನಿರ್ವಾಹಕ ಸದಸ್ಯರು ; ಮತ್ತು
(ಇ) ಭಾರತೀಯ ಕೈಗಾರಿಕಾಭಿವೃದ್ಧಿ ಬ್ಯಾಂಕಿನ ಇಬ್ಬರು ನಾಮನಿರ್ದೇಶಿತ ವ್ಯಕ್ತಿಗಳು.

ಸಭೆಗೆ ಬಹಿಷ್ಕಾರವೆಸಗಿದ್ದ ಭಾ.ಜ.ಪ. ಸದಸ್ಯರ ಪುನರಾಗಮನ

+ ಶ್ರೀ ರುಕ್ಮಯ್ಯಪೂಜಾರಿ (ವಿಟ್ಲ):- ಸನ್ಮಾನ್ಯ ಸಭಾಧ್ಯಕ್ಷೀಣಿಯವರೇ ನಾವು ಕಳೆದ 5-6 ದಿವಸಗಳಿಂದ ಸದನದ ಕಾರ್ಯಕಲಾಪಗಳಿಗೆ ಬಹಿಷ್ಕಾರ ಹಾಕಿದ್ದೆವು. ಇವತ್ತು ಬೆಳಿಗಿನಿಂದ ಬಹಿಷ್ಕಾರವನ್ನು ವಾಪಸ್ ಪಡೆದು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂಥ ತೀರ್ಮಾನವನ್ನು ನಮ್ಮ ಪಕ್ಷದ ವತಿಯಿಂದ ಮಾಡಿ ಇಂದಿನಿಂದ ಭಾಗವಹಿಸುತ್ತಿದ್ದೇವೆ. ನಾವು ಬಹಿಷ್ಕಾರ ಮಾಡಿದಂಥ ವಿಚಾರ ಸದನಕ್ಕೆ ಗೊತ್ತಿದೆ. ಸಂಸದೀಯ ವ್ಯವಸ್ಥೆಯಲ್ಲಿ ಆಯವ್ಯಯ ಪತ್ರ ಅತ್ಯಂತ ಒಂದು ಗುಪ್ತವಾದ ದಾಖಲಾತಿ. ಅದನ್ನು ಕಾಪಾಡುವಂಥದ್ದು ಮತ್ತು ಬಹಿರಂಗಪಡಿಸದೆ ಇರತಕ್ಕಂಥದ್ದು ಸರ್ಕಾರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಆದರೆ ಸರ್ಕಾರ ಆ ಒಂದು ದಿಕ್ಕಿನಲ್ಲಿ ಒಂದು ಅಪರಾಧ ಮಾಡಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಸದನದ ಸತ್ಸಂಪ್ರದಯ ಏನೆಂದರೆ ಬಜೆಟ್ ಮಂಡನೆ ಮಾಡಿದ ನಂತರ ಅದನ್ನು ಇನ್ಸಿಮೇಟ್ ಮಾಡುವುದು, ಚರ್ಚೆ ಪ್ರಾರಂಭ ಮಾಡುವುದು ಕೂಡ ವಿರೋಧಪಕ್ಷದ ನಾಯಕರ ಕಡೆಯಿಂದ ಇದ್ದು ಅದು ಇಷ್ಟು ವರ್ಷಗಳಿಂದ ನಡೆದುಕೊಂಡು ಬಂದಿದೆ. ಆದರೆ ಈ ಸಾರಿ ಅದಕ್ಕೆ ತಿಲಾಂಜಲಿ ಕೊಟ್ಟು ಸರ್ಕಾರದ ವತಿಯಿಂದಲೇ ಚರ್ಚೆಯನ್ನು ಪ್ರಾರಂಭ ಮಾಡಿಸಿದ್ದಾರೆ. ಇದೂ ಕೂಡ ಸರ್ಕಾರದ ಲೋಪವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಸರ್ಕಾರವು ಪ್ರತಿಯೊಂದು ಹಂತದಲ್ಲೂ ಕೂಡ ವಿರೋಧಪಕ್ಷದ ಮಾನ್ಯ ಸದಸ್ಯರುಗಳಿಗೆ ಅಗೌರವದ ರೀತಿಯಲ್ಲಿ ವ್ಯವಹಾರ ಮಾಡಿರುವುದಕ್ಕೆ ನಮ್ಮದು ತೀವ್ರ ಪ್ರತಿಭಟನೆ ತೋರಿಸುವ ದೃಷ್ಟಿಯಿಂದ ಈ ಸದನದ ಕಾರ್ಯಕಲಾಪಗಳಿಗೆ ಬಹಿಷ್ಕಾರವನ್ನು ಹಾಕಿದ್ದೆವು. ಈ ಬಗ್ಗೆ ನಮ್ಮ ಪ್ರತಿಭಟನೆ ಕೂಡ ಇದೆ. ಆದರೂ ಕೂಡ ನಡೆದಂಥ ಮಾತಿನ ವಿಷಯ ಹಾಗೂ ಮಾನ್ಯ ಸಭಾಧ್ಯಕ್ಷರ ಮಧ್ಯಸ್ಥಿಕೆ ಒಂದು ಹಿನ್ನೆಲೆಯಲ್ಲಿ ಸರ್ಕಾರದ ಮಾನ್ಯ ಸಚಿವರುಗಳಾದ ಮಾನ್ಯ ಧರ್ಮಸಿಂಗ್‌ರವರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮತ್ತು ಮಾನ್ಯ ವೀರಪ್ಪಮೊಯಿಲಿಯವರು ಮತ್ತು ಮಾನ್ಯ ವಿರೋಧಪಕ್ಷದ ನಾಯಕರುಗಳು ಸಮಕ್ಷಮದಲ್ಲಿ ಮಾನ್ಯ ಅಧ್ಯಕ್ಷರ ಮನೆಯಲ್ಲಿ ಮೀಟಿಂಗ್ ನಡೆಸಿ ಅಲ್ಲಿ ಒಂದು ಒಮ್ಮತದ ತೀರ್ಮಾನಕ್ಕೆ ಬಂದೆವು. ಅದು ಏನೆಂದರೆ ಈ ಬಜೆಟ್ ಗೌಪ್ಯ ವಿಚಾರ ಇಟ್ಟುಕೊಳ್ಳಲಿಕ್ಕೆ ಕಷ್ಟವಾಯಿತು. ಆದರೂ ಸರ್ಕಾರದ ಹಿತದೃಷ್ಟಿಯಿಂದ ಈ ಹಿನ್ನೆಲೆಯಲ್ಲಿ ರಾಜ್ಯದ ನಾಲ್ಕೂವರೆಕೋಟಿ ಜನರ ಹಿತದೃಷ್ಟಿಯಿಂದ ಈ ಐದು ದಿನಗಳ ಸದನದ ಕಲಾಪಗಳಿಗೆ ಬಹಿಷ್ಕಾರ ಹಾಕಿದ್ದನ್ನು ಹಿಂತೆಗೆದುಕೊಂಡು ಕಲಾಪದಲ್ಲಿ ನಾವು ಭಾಗವಹಿಸಲು ತೀರ್ಮಾನ ಮಾಡಿದೆವು. ಮಾನ್ಯ ಸಭಾಧ್ಯಕ್ಷರ ಸಮ್ಮುಖದಲ್ಲಿ ಬಂದ ಅಭಿಪ್ರಾಯದಂತೆ, ಎರಡು ಅಭಿಪ್ರಾಯಗಳು ಒಂದು ಸದನದ ಸಮಿತಿ ಮಾಡುವಂಥದ್ದು, ಮತ್ತು ವಿರೋಧಪಕ್ಷದ ನಾಯಕರಿಗೆ ಬಜೆಟ್ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡದಿರುವುದು. ಇದರ ಬಗ್ಗೆ ಸರ್ಕಾರ ತಪ್ಪು ಒಪ್ಪಿಕೊಂಡಂತಾದರೂ ಒಮ್ಮತದ ಅಭಿಪ್ರಾಯದಲ್ಲಿ ಮೂಡಿಬಂದಂತೆ ಅದರ ಒಂದು ಆಧಾರದಮೇಲೆ ನಾವು ಇಂದು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲಿಕ್ಕೆ ಪ್ರಯತ್ನ ಮಾಡಿದೆವು. ಆದರೆ ಇನ್ನೂ ಕೂಡ ಮಾನ್ಯ ವಿರೋಧಪಕ್ಷದ ಮಿತ್ರರು, ಪಕ್ಷದ ನಾಯಕರು ಸದನದ ಕಾರ್ಯಕಲಾಪಗಳಿಗೆ ಭಾಗವಹಿಸಲಿಲ್ಲ. ನಾನು ತಮ್ಮ ಮೂಲಕ